ದಿನಾಂಕಃ 20.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರಿಂದಃ

ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹಾಜರು ಪಡಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಹಲವು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತಿದ್ದೇನೆ. 5 ಪುಟಗಳುಳ್ಳ ಆರ್.ಟಿ.ಸಿ ಯನ್ನು ಒಟ್ಟಾರೆಯಾಗಿ ನಿಪಿ1 ಎಂದು ಗುರುತಿಸಲಾಯಿತು. ಖರೀದಿ ಕರಾರುಪತ್ರವನ್ನು ನಿಪಿ2 ಎಂದು ಗುರುತಿಸಲಾಯಿತು. ಅದರ 1 ನೇ ಪುಟದಲ್ಲಿ ಸಾಕ್ಷಿ ಹೆಬ್ಬೆಟ್ಟು ಹಾಕಿದ್ದೇನೆಂದು, 2 ನೇ ಪುಟದಲ್ಲಿ ಪ್ರತಿವಾದಿ, ಸಾಕ್ಷಿಗಳು ಮತ್ತು ಪತ್ರಬರಹಗಾರರು ಸಹಿ ಮಾಡಿದ್ದಾರೆಂದು ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ2(ಎ) ಇಂದ (ಡಿ) ಎಂದು ಗುರುತಿಸಲಾಯಿತು. ಮತ್ತೊಂದು ಖರೀದಿ ಕರಾರುಪತ್ರವನ್ನು ನಿಪಿ3 ಎಂದು ಗುರುತಿಸಲಾಯಿತು. ಅದರ 1 ಮತ್ತು 2 ನೇ ಪುಟದಲ್ಲಿ ಸಾಕ್ಷಿ ಹೆಬ್ಬೆಟ್ಟು ಹಾಕಿದ್ದೇನೆಂದು, 2 ನೇ ಪುಟದಲ್ಲಿ ಒಬ್ಬ ಸಾಕ್ಷಿ ಹೆಬ್ಬೆಟ್ಟು ಹಾಕಿದ್ದಾರೆಂದು, ಪ್ರತಿವಾದಿ, ಒಬ್ಬ ಸಾಕ್ಷಿ, ಮತ್ತು ಪತ್ರಬರಹಗಾರರು ಸಹಿ ಮಾಡಿದ್ದಾರೆಂದು ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ3(ಎ) ಇಂದ (ಸಿ) ಎಂದು ಗುರುತಿಸಲಾಯಿತು. ವಕೀಲರ ನೋಟಿಸ್ ಪ್ರತಿಯನ್ನು ನಿಪಿ4 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ5 ಎಂದು, ಅಂಚೆ ರಸೀದಿಯನ್ನು ನಿಪಿ6 ಎಂದು, ವಕೀಲರ ಪ್ರತ್ಯುತ್ತರ ನೋಟಿಸ್ ಪ್ರತಿಯನ್ನು ನಿಪಿ7 ಎಂದು ಗುರುತಿಸಲಾಯಿತು.

ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ